ಕಥೆ




**ಸಪ್ನಾ ಕಟ್ಟಿ**

ಕಲೆ: ಮುರಳೀಧರ್ ರಾಥೋಡ್

# ನಿರ್ಜರ

‘ಬಳಸಿದ್ದು ಗೇಟ್ (ನಡಿಗೆ) ಎನಾಲೆಸಿಸ್ ಬಯೋಮೆಟ್ರಿಕ್ ಸರ್, ಆರೋಪಿ ಸಂಬಂಧಿಕನೇ ಇರಬಹುದು. ಆದರೆ, ವಯಸ್ಸಾದಂತೆ ಆತನ ಮಂಡಿ ಸವೆದಿರೋದಿಲ್ಲವೆ? ಬೆನ್ನು ಬಾಗಿರೋಲ್ವೆ? ಅವನ ಈಗಿನ ದೇಹಾಕೃತಿ ಗೊತ್ತಾಗೋದಾದ್ರೂ ಹ್ಯಾಗೆ? ಇವರ ಹತ್ತಿರ ಇರೋದು ಬಹುಶಃ ಹತ್ತೋ ಹದಿನೈದೋ ವರ್ಷಗಳ ಹಿಂದೆ ಫೀಡ್ ಮಾಡಿರೋ ಮಾಹಿತಿ. ಇದಕ್ಕಿಂತಾ ಸಿಂಪಲ್ ಸಿ.ಸಿ ಟಿ.ವಿ ಕ್ಯಾಮೆರಾ ಸಾಕಾಗಿತ್ತು....’ ಜನಾರ್ದನರ ಮುಖದ ಮೇಲಿನ ಚಾಕುವಿನಂಥ ಚೂಪು ನೋಟ ಶಿವಾನಿಯ ಮುಂದಿನ ಮಾತುಗಳನ್ನು ಮರಳಿ ಗಂಟಲಿಗೆ ನೂಕಿತು.



ತನಿಖೆ ಮಾಡಲು ಬಂದಿದ್ದು ಶಹರದ ಹೆಸರಾಂತ ಉದ್ಯಮಿ ಸುಖೀರಾಮ್ ವಿರ್ಘ್ ಅವರ ಮನೆ ಅನ್ನೋದನ್ನು ಅರೆಕ್ಷಣ ಮರೆತಿದ್ದಳು ಶಿವಾನಿ. ಅವಳು ತಾಂತ್ರಿಕ ಪಾಯಿಂಟುಗಳನ್ನು ಮರೆತರೂ ತಪಾಸಣೆಯಲ್ಲಿ ಅವಳ ದೃಷ್ಟಿ ಚುರುಕು, ಅಂದರೆ ಮತ್ತಾರೂ ನೋಡದ ವೈಚಿತ್ರ್ಯಗಳು ಅವಳ ಕಣ್ಣಿಗೆ ಬೀಳುತ್ತಿದ್ದವು. ಆದ್ದರಿಂದಲೇ ಎಲ್ಲ ರಿಪೋರ್ಟರುಗಳಲ್ಲಿ ಅವಳು ಜನಾರ್ದನರ ಫೆವರಿಟ್ಟು.

ಸುಖೀರಾಮರೊಂದಿಗೆ ಈ ಮನೆಯಲ್ಲಿ ಈಗಿರೋರು ಇಬ್ಬರೇ; ಅವರ ಎರಡನೆಯ ಹೆಂಡತಿ ಮತ್ತವರ ಮೊದಲ ಹೆಂಡತಿಯ ಎರಡನೆಯ ಮಗಳು. ಅವರ